==========================

*1) ಬೋಧನಾ ಕ್ರಿಯೆಯಿಂದ ಅಪೇಕ್ಷಿತ ಬದಲಾವಣೆ ನಿರೀಕ್ಷಿಸಬೇಕಾದರೆ ಬೋಧಿಸುವ ವಿಷಯಗಳನ್ನು ನಿರಂತರವಾಗಿ -*

1) ಬದಲಾಯಿಸಬೇಕು
2) ಪರೀಕ್ಷಿಸಬೇಕು
3) ಮೌಲ್ಯಮಾಪನ ಮಾಡಬೇಕು ✓
4) ಬೋಧಿಸಬೇಕು

*2) ವಿದ್ಯಾರ್ಥಿಗಳ ಎಲ್ಲಾ ರೀತಿಯ ಚಟುವಟಿಕೆಗಳ ಸಂಗ್ರಹ*

ಸಾಧನ -

1) ಪೋರ್ಟ್ ಪೋಲಿಯೊ ✓
2) ರೇಟಿಂಗ್ ಸ್ಕೇಲ್

3) ಪರಿಶೀಲನ ಪಟ್ಟಿ
4) ಸಂಚಿತ ದಾಖಲೆ

*3)  ವಿಶೇಷ ಅಗತ್ಯತೆಯ  ಮಕ್ಕಳಿಗೆ ನೀಡಬೇಕಾದ ಶಿಕ್ಷಣ -*
a) ವಿಶೇಷ ಶಾಲೆಯ ವಿಶೇಷ ಮಕ್ಕಳೊಂದಿಗೆ ನೀಡಬೇಕಾದ ಶಿಕ್ಷಣ.
b) ಅಂಗವಿಕಲ ಮಕ್ಕಳಿಗೆ ನೀಡಬೇಕಾದ ಪ್ರತ್ಯೇಕ ಶಿಕ್ಷಣ.
c) ತರಗತಿಯ ಸಾಮಾನ್ಯ ಮಕ್ಕಳೊಂದಿಗೆ ಬೋಧನೆ.✓
d) ವಿಶೇಷ ಶಾಲೆಯಲ್ಲಿ ವಿಶೇಷ ಶಿಕ್ಷಕರಿಂದ ಶಿಕ್ಷಣ

*4) ಓರ್ವ ಉತ್ತಮ ತರಗತಿ ಶಿಕ್ಷಕರು ಲಕ್ಷಣ ಆಗಿರುವುದಿಲ್ಲ -*
1) ಕಲಿಕಾರ್ಥಿಗಳ ಸಹಜ ಆಸಕ್ತಿಯನ್ನು ಪೋಷಿಸುವರು.
2) ಕಲಿಕಾರ್ಥಿಗಳ ಚರ್ಚೆಯನ್ನು ಪ್ರೋತ್ಸಾಹಿಸುವರು
3) ವಾಸ್ತವಿಕ ಜಗತ್ತಿನ ಚಟುವಟಿಕೆಗಳಲ್ಲಿ ಕಲಿಕಾರ್ಥಿಗಳನ್ನು ತೊಡಗಿಸುವರು.
4) ವಿದ್ಯಾರ್ಥಿಗಳ ಮಧ್ಯೆ ಅನಾರೋಗ್ಯಕರ ಸ್ಪರ್ಧೆ

ಏರ್ಪಡಿಸುವರು.✓

*5) ಶಿಕ್ಷಕರ ಪಾತ್ರವು -*
1) ಮಾಹಿತಿಯ ಹಸ್ತಾಂತರ
2) ಕೌಶಲ್ಯಗಳ ತರಬೇತಿ ಕೊಡುವುದು
3) ಜ್ಞಾನವನ್ನು ನೀಡುವುದು
4) ಜ್ಞಾನದ ಸಂರಚನೆಗೆ ಸಹಾಯ ಮಾಡುವುದು ✓

*6) ಈ ಒಂದನ್ನು ಹೊರತುಪಡಿಸಿ ಇವು ಉತ್ತಮ ಚರ್ಚೆಯ ಮಾನದಂಡಗಳು  (TET 2022)*
1) ಚರ್ಚೆಯ ಸಮಯದಲ್ಲಿ ಶಿಕ್ಷಕರು ಒಬ್ಬ ಅಥವಾ ಇಬ್ಬರು ವಿದ್ಯಾರ್ಥಿಗಳು ಪ್ರಬಲರಾಗುವಂತೆ ಮಾಡಬಾರದು.
2) ಚರ್ಚೆ ವಿಷಯವಂತರವಾಗಬಾರದು
3) ಆರೋಗ್ಯಕರ ಚರ್ಚೆಯಾಗಬೇಕು
4) ಏಕಕಾಲದಲ್ಲಿ ಒಬ್ಬ ವಿದ್ಯಾರ್ಥಿ ಮಾತನಾಡಲು ಅವಕಾಶ ನೀಡಬೇಕು✓

*7) ಈ ಕೆಳಗಿನ ಯಾವ ಮೌಲ್ಯಮಾಪನ ಸಾಧನ ಮಗುವಿನ ಸಂಪೂರ್ಣ ಮಾಹಿತಿ ಒಳಗೊಂಡಿರುತ್ತದೆ?*
1) ರೂಬ್ರಿಕ್ಸ್

2) ಉಪಖ್ಯಾನ ದಾಖಲೆ
3) ಸಂಚಿತ ದಾಖಲೆ✓
4) ಪೋರ್ಟ್ ಪೋಲಿಯೋ

*8) ಪರೀಕ್ಷಾಪೂರ್ವ ತಯಾರಿಕೆ ಬಳಸುವ 3 ಆಯಾಮದ ತಕ್ತೆ -*
1) ಪ್ರಶ್ನೆ ಪತ್ರಿಕೆ
2) ಪ್ರಶ್ನಾಕೋಶ
3) ನೀಲ ನಕಾಶೆ✓
4) ಪಾಠ ಯೋಜನೆ

*9) ನೀಲ ನಕಾಶೆಯಿಂದ ಆಗುವ ಪ್ರಯೋಜನಗಳಲ್ಲಿ ಇದು ಸೇರಿಲ್ಲ -*
1) ಪ್ರಶ್ನೆ ಪತ್ರಿಕೆ ರಚಿಸಲು ಮಾರ್ಗದರ್ಶನ ನೀಡುತ್ತದೆ
2) ಪ್ರಶ್ನೆ ಪತ್ರಿಕೆ ರಚನೆಯಲ್ಲಿ ಗೊಂದಲವನ್ನುಂಟುಮಾಡುತ್ತದೆ✓
3) ಪ್ರಶ್ನೆಗಳ ಪುನರಾವರ್ತನೆ ತಡೆಯುತ್ತದೆ
4) ವಿವಿಧ ಉದ್ದೇಶಗಳಿಗನುಗುಣವಾಗಿ ವಿವಿಧ ರೀತಿಯ ಪ್ರಶ್ನೆಗಳನ್ನು ರಚಿಸಲು ನೆರವಾಗುತ್ತದೆ.

*10) ನೀಲ ನಕಾಶೆ ಈ ಕೆಳಗಿನ ಯಾವ ಅಂಶ

ಒಳಗೊಂಡಿರುವುದಿಲ್ಲ?*
1) ಉದ್ದೇಶಗಳ ಆಧಾರಿತ
2) ವಿಷಯಾಧಾರಿತ
3) ಪ್ರಶ್ನೆಗಳ ಸ್ವರೂಪ ಆಧಾರಿತ
4) ಸಾಧನ ತಂತ್ರ ಆಧಾರಿತ✓

*••••••••••••••••••••••••••••••••••••••••••••*

1)  *8ನೆಯ ತರಗತಿಯ ಮಗುವೊಂದು ಮಧ್ಯಮ ಮೇಲ್ದರ್ಜೆ ವರ್ಗದ ಭಾಷಾ ಪ್ರಸರಣದಲ್ಲಿ ಪಠ್ಯ ವಿಷಯವನ್ನು ಓದಲು ಕಷ್ಟ ಪಡುವುದನ್ನು ಶಿಕ್ಷಕರು ಗಮನಿಸಿದರು. ಇಲ್ಲಿ ಬೋಧನಾ-ಕಲಿಕಾ ಪ್ರಕ್ರಿಯೆಯ ದೌರ್ಬಲ್ಯವನ್ನು ಸಹಿಸಲು ನೆರವಾಗುವ ಮೌಲ್ಯಮಾಪನ ವಿಧಾನ* [GPSTR 2022]

(1) ಸಂಕಲಿತ ಮೌಲ್ಯಮಾಪನ
(2) ರೂಪಣಾತ್ಮಕ ಮೌಲ್ಯಮಾಪನ √
(3) ಆಂತರಿಕ ಮೌಲ್ಯಮಾಪನ
(4) ಬಾಹ್ಯ ಮೌಲ್ಯಮಾಪನ

2)  *ದತ್ತಾಂಶವನ್ನು ಸಂಗ್ರಹಿಸುವ ಮೂಲಕ, ವಿಶ್ಲೇಷಿಸಿ,ಪರಾಮರ್ಶಿಸಿ ಬೋಧನಾ ಮತ್ತು ಕಲಿಕಾ ಪ್ರಕ್ರಿಯೆಯನ್ನು ಸುಧಾರಿಸುವ ಪ್ರಕ್ರಿಯೆ*
1) ಮೌಲ್ಯಮಾಪನ ( evaluation)
2) ಮೌಲ್ಯಾಂಕನ  ( assessment) √
3) ನಿಯೋಜನ ಮೌಲ್ಯಮಾಪನ
4) ನೈದಾನಿಕ ಮೌಲ್ಯಮಾಪನ

3) ಲಿಂಗ ಪಾತ್ರದ ಕುರಿತು ಅರ್ಥೈಸುವಿಕೆ ಮತ್ತು

ಜಾಗೃತಿ ಮೂಡಿಸುವ ಪ್ರಕ್ರಿಯೆ -
1) ಲಿಂಗ ಸಮಾನತೆ
2) ಲಿಂಗ ತಾರತಮ್ಯ
3) ಲಿಂಗ ಸಂವೇದನೆ ( ಲಿಂಗ ಪ್ರಜ್ಞೆ / ಲಿಂಗಸೂಕ್ಷ್ಮತೆ )√
4) ಲಿಂಗ ಗುರುತಿಸುವಿಕೆ

*4) ಕೆಳಗಿನ ಯಾವ ಆಯ್ಕೆ ತಪ್ಪಾಗಿದೆ?*
1) ಮಕ್ಕಳ ಪೂರ್ವಜ್ಞಾನ ತಿಳಿಯಲು ಮೌಖಿಕ ಕಾರ್ಯ ಹೆಚ್ಚು ಸೂಕ್ತವಾದ ತಂತ್ರ.
2) ಅಭ್ಯಾಸ ಕಾರ್ಯದ ಮೂಲಕ ಮಕ್ಕಳಿಗೆ ಕಲಿಕೆಯನ್ನು ಹೆಚ್ಚು ಮನದಟ್ಟು ಮಾಡಿಸಬಹುದು.
3) ಮನೆ ಗೆಲಸ ತಂತ್ರದ ಮೂಲಕ ಮಕ್ಕಳ ಉಚ್ಚಾರಣಾ ದೋಷವನ್ನು ತಿದ್ದಬಹುದು.√
4) ಗುಂಪು ಕಾರ್ಯವು ಮಕ್ಕಳ ಕಲಿಕೆಯಲ್ಲಿ ಕುತೂಹಲ ಮತ್ತು  ಆಸಕ್ತಿ ಹೆಚ್ಚಿಸುತ್ತದೆ.

*5) ಈ ಕೆಳಗಿನ ಯಾವುದು ಫೋರ್ಟ್ ಫೋಲಿಯೋ ಸಾಧನದ ಭಾಗವಾಗಿರುವುದಿಲ್ಲ?*
1) ರೇಖಾ ಚಿತ್ರಗಳು
2)  ವರ್ಕ್ ಶೀಟುಗಳು
3) ತರಗತಿ ಚರ್ಚೆ √

4) ಛಾಯಾಚಿತ್ರಗಳು

*6) ರೇಟಿಂಗ್ ಸ್ಕೇಲ್ [ದರ್ಜಾ ಮಾಪನ] ಈ ಕೆಳಗಿನ ಯಾವ ತಂತ್ರಕ್ಕೆ ಬಳಸುವ ಸಾಧನವಾಗಿದೆ?*
1) ಅವಲೋಕನ
2) ವೀಕ್ಷಣೆ √
3) ರಸಪ್ರಶ್ನೆ
4) ನಿಯೋಜನೆ

*7) ನೈದಾನಿಕ ಪರೀಕ್ಷೆ ಕೈಗೊಳ್ಳಬೇಕಾದರೆ ಮೊದಲ ಹಂತ ಯಾವುದು?*
1) ಪೂರ್ವ ಪರೀಕ್ಷೆಯ ನಮೂನೆ ಸಿದ್ದುಪಡಿಸುವುದು
2) ಉಪ ಸಾಮರ್ಥ್ಯಗಳ ವಿಂಗಡಣೆ.
3) ಸಾಮರ್ಥ್ಯ ಗುರುತಿಸುವಿಕೆ √
4) ಪರಿಹಾರ ಬೋಧನೆ

*8) ಬೋಧನಾ - ಕಲಿಕಾ ಪ್ರಕ್ರಿಯೆಯಲ್ಲಿ ಐಸಿಟಿ ಯ ಪ್ರಮುಖ ಪಾತ್ರ -*
1) ಇವು ಮಕ್ಕಳ ಅವಧಾನ ವಿಕೇಂದ್ರಿಕರಿಸುತ್ತದೆ
2) ಶಿಕ್ಷಕರ ಬೋಧನೆಗೆ ಅಡೆತಡೆ ಉಂಟು ಮಾಡುತ್ತವೆ
3) ಬೋಧನೆ ಮತ್ತು ಕಲಿಕಾ ಪ್ರಕ್ರಿಯೆಯನ್ನು ಹೆಚ್ಚು

ಪರಿಣಾಮಕಾರಿಗೊಳಿಸುತ್ತದೆ √
4) ಬೋಧನೆಯ ವೈಭವೀಕರಣಕ್ಕೆ ಸಹಕಾರಿ

*9) 5 E ಮಾದರಿ ಪಾಠಯೋಜನೆಯ ಈ ಹಂತದಲ್ಲಿ ವಿದ್ಯಾರ್ಥಿಗಳು ಕಲಿಕಾಂಶಗಳನ್ನು ಸ್ಪಷ್ಟವಾಗಿ ಅರ್ಥೈಸಿಕೊಳ್ಳುವರು-*
1) ತೊಡಗಿಸಿಕೊಳ್ಳುವಿಕೆ
2) ಅನ್ವೇಷಣೆ
3) ವಿವರಿಸುವುದು √
4) ವಿಸ್ತರಣೆ

*10) ಅನುಗಮನ ಬೋಧನಾ ವಿಧಾನವು ಒಳಗೊಂಡಿರದ ತತ್ವ -*
1) ಉದಾರಣೆಯಿಂದ ನಿಯಮದೆಡೆಗೆ
2) ನಿರ್ದಿಷ್ಟದಿಂದ ಸಾಮಾನ್ಯದ ಕಡೆಗೆ
3) ಸಾಮಾನ್ಯದಿಂದ ನಿರ್ದಿಷ್ಟದ ಕಡೆಗೆ √
4) ಮೂರ್ತದಿಂದ ಅಮೂರ್ತದ ಕಡೆಗೆ

==========================

*1) ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಅಂಕಗಳ ಬದಲಿಗೆ ಗ್ರೇಡ್ ವ್ಯವಸ್ಥೆ ಜಾರಿಗೆ ತಂದಿರುವ ಮುಖ್ಯ ಉದ್ದೇಶ -*
1) ವಿದ್ಯಾರ್ಥಿಗಳಲ್ಲಿ ಪರೀಕ್ಷಾ ಭಯ ಹೆಚ್ಚಿಸುವುದು
2) ವಿದ್ಯಾರ್ಥಿಗಳ ಮಧ್ಯ ಸ್ಪರ್ಧೆ ಹೆಚ್ಚಿಸಲು
3) ವಿದ್ಯಾರ್ಥಿಗಳಲ್ಲಿ ಸ್ಪರ್ಧಾತ್ಮಕ ಮನೋಭಾವ ಕಡಿಮೆ ಮಾಡಲು
4) ವಿದ್ಯಾರ್ಥಿಗಳಲ್ಲಿ ಆರೋಗ್ಯಕರ ಸ್ಪರ್ಧೆ ಮೂಡಿಸಲು √

*2) ಈ ಕೆಳಗಿನ ಯಾವ ಆಯ್ಕೆ RTE - 2009 ರ ಕಾಯ್ದೆಯ ಮುಖ್ಯ ಅಂಶ ಆಗಿರುವುದಿಲ್ಲ?*
1) 6 ರಿಂದ 14 ವರ್ಷದ ವರೆಗಿನ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡುವುದು.
2) ಮಕ್ಕಳಿಗೆ ದೈಹಿಕ ಮತ್ತು ಮಾನಸಿಕ ದಂಡನೆ ನೀಡದಿರುವುದು

3) 1 ರಿಂದ 8ನೇ ತರಗತಿ ಮಕ್ಕಳಿಗೆ ಅಗತ್ಯ ಪ್ರಮಾಣದ ಶುಲ್ಕ ಸಂಗ್ರಹಿಸಲು ಅವಕಾಶ √
4) ಈ ಕಾಯ್ದೆಯು  ಏಪ್ರಿಲ್ 1, 2010 ರಿಂದ ದೇಶಾದ್ಯಂತ ಜಾರಿಗೆ ಬಂದಿದೆ.

*3)  ವಿದ್ಯಾರ್ಥಿಗಳು ಜ್ಞಾನವನ್ನು ಅನ್ವಯ ಮಾಡಿಕೊಳ್ಳುವಂತೆ ಮಾಡುವ '5 E ಪಾಠ ಯೋಜನೆಯ' ಬೋಧನೆಯ ಹಂತ  ( TET - 2022)*
1) ತೊಡಗಿಸಿಕೊಳ್ಳುವಿಕೆ
2) ಆವಿಷ್ಕರಿಸು
3) ವಿವರಿಸು
4) ವಿಸ್ತಾರಗೊಳಿಸು √

*4) ಶಿಕ್ಷಕರು ತರಗತಿಯಲ್ಲಿ 'ಪ್ರತಿ ಬೋಧನಾ ಅಂಶದ' ಬಳಿಕ ಪ್ರಶ್ನಿಸುತ್ತಾರೆ. ಇಲ್ಲಿ ಶಿಕ್ಷಕರು ಬಳಸಿದ ಮೌಲ್ಯಮಾಪನ ವಿಧಾನ -  (Tet 2022)*
1) ಸಂಕಲನಾತ್ಮಕ
2) ರೂಪಣಾತ್ಮಕ √
3) ಸಮಗ್ರ
4) ಸಾಪೇಕ್ಷ

*5) ಶಿಕ್ಷಕರು ಕಲಿಕಾಂಶ ಅರ್ಥ ಮಾಡಿಸಲು ಪುನರ್ ಮನನ ಪ್ರಶ್ನೆ ಕೇಳುವುದು ಈ ವಿಧದ ಮೌಲ್ಯಮಾಪನಕ್ಕೆ ಉದಾಹರಣೆ -*
1) ಕಲಿಕೆಯ ಮೌಲ್ಯಮಾಪನ
2) ಸಾಧನ ಮೌಲ್ಯಮಾಪನ
3) ಕಲಿಕೆಗಾಗಿ ಮೌಲ್ಯಮಾಪನ √
4) ಮಾಪನ ಕಲಿಕೆ

*6) ತರಗತಿಯಲ್ಲಿ ಮಕ್ಕಳ ಕಲಿಕಾ ದೌರ್ಬಲ್ಯವನ್ನು ಪರಿಹರಿಸುವ ಕ್ರಮ  -*
1) ನೈದಾನಿಕ ಪರೀಕ್ಷೆ
2) ನಿಯೋಜಿತ ಮೌಲ್ಯಮಾಪನ
3) ಶಿಕ್ಷಕರು ಪರಿಣಾಮಕಾರಿ ಬೋಧಿಸುವುದು
4) ಪರಿಹಾರ ಬೋಧನೆ ಕೈಗೊಳ್ಳುವುದು √

*7) ಪರಿಹಾರ ಬೋಧನೆಗೆ ಸಂಬಂಧಿಸಿದಂತೆ ತಪ್ಪಾದ ಆಯ್ಕೆ ಗುರುತಿಸಿ -*
1) ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ನೀಡುವ ವಿಶೇಷ ಬೋಧನೆ
2) ಕಲಿಕಾ ದೋಷವನ್ನು ಪತ್ತೆ ಹಚ್ಚುವ ಪರಿಣಾಮಕಾರಿ ಕ್ರಮವಾಗಿದೆ √

3) ಇದು ಒಂದು ರೂಪಣಾತ್ಮಕ ಮೌಲ್ಯಮಾಪನದ ತಂತ್ರವಾಗಿದೆ
4) ಇದನ್ನು ಶಾಲಾ ಅವಧಿಯ ಕೊನೆಯ ಅವಧಿಯಲ್ಲಿ ಕೈಗೊಳ್ಳಲಾಗುವುದು.

*8) ಕೆಳಗಿನ ಯಾವುದು  ಮೌಲ್ಯಮಾಪನ ತಂತ್ರವಾಗಿರುವುದಿಲ್ಲ -*
1) ಘಟಕ ಪರೀಕ್ಷೆ
2) ಅವಲೋಕನ ಪಟ್ಟಿ √
3) ವೀಕ್ಷಣೆ
4) ರಸಪ್ರಶ್ನೆ

*9) ಈ ಕೆಳಗಿನ ಯಾವ ಆಯ್ಕೆಗಳು NCF 2005 ರ ಮಾರ್ಗದರ್ಶಿ ತತ್ವವಾಗಿವೆ ಗುರಿತಿಸಿ?*
ಎ) ಬಾಯಿ ಪಾಠ ಮುಕ್ತ ಕಲಿಕೆಗೆ ಆದ್ಯತೆ.
ಬಿ) ನಿರಂಕುಶ ಬೋಧನೆಗೆ ಆದ್ಯತೆ ನೀಡುವುದು.
ಸಿ) ಪರೀಕ್ಷೆಗಳನ್ನು ಹೆಚ್ಚು ನಮ್ಯವಾಗಿಸುವುದು.
ಡಿ) ಪಠ್ಯಪುಸ್ತಕವು ಪಠ್ಯಕ್ರಮವನ್ನು ಮೀರಿ ನಿಲ್ಲುವಂತೆ ಶ್ರೀಮಂತಗೊಳಿಸುವುದು.
1) ಎ, ಬಿ ಮಾತ್ರ ಸರಿ
2) ಎ, ಸಿ, ಡಿ ಮಾತ್ರ ಸರಿ

3) ಎ ಮತ್ತು ಸಿ ಮಾತ್ರ ಸರಿ √
4) ಸಿ ಮತ್ತು ಡಿ ಮಾತ್ರ ಸರಿ

*10) ಸಂಕಲನಾತ್ಮಕ ಮೌಲ್ಯಮಾಪನಕ್ಕೆ ಇದು ಉದಾಹರಣೆ -*
1) ಘಟಕ ಪರೀಕ್ಷೆ
2) ನೈದಾನಿಕ ಪರೀಕ್ಷೆ
3) ಸೆಮಿಸ್ಟರ್ ಪರೀಕ್ಷೆ √
4) ರಸಪ್ರಶ್ನೆ ಕೈಗೊಳ್ಳುವುದು

===============================
*1) ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯನ್ನು ಅಳೆಯಬಹುದಾದ ಪರೀಕ್ಷೆ -*
1) ಸಾಧನಾ ಪರೀಕ್ಷೆ √
2) ವ್ಯಕ್ತಿತ್ವ ಪರೀಕ್ಷೆ
3) ಬುದ್ಧಿ ಶಕ್ತಿ ಪರೀಕ್ಷೆ

4) ಅಭಿಕ್ಷಮತೆ ಪರೀಕ್ಷೆ

*2) ವಿದ್ಯಾರ್ಥಿಗಳು ಈ ಬಗೆಯ ಶಿಕ್ಷಕರನ್ನು ಇಷ್ಟಪಡುತ್ತಾರೆ -*
1) ಸರ್ವಾಧಿಕಾರಿ
2) ನಿರಾಸಕ್ತಿ  & ನಿಧಾನಿ
3) ಪ್ರಜಾಪ್ರಭುತ್ವವಾದಿ √
4) ಅಂತರ್ಮುಖಿ

*3) ರಾಜ್ಯ ಸರ್ಕಾರ ಶಾಲೆಗಳಲ್ಲಿ ಜಾರಿಗೆ ತಂದಿರುವ ಭೋದನಾ ಕ್ರಮ* -
1) ಪರೀಕ್ಷಾ ಕೇಂದ್ರಿತ
2) ಪಠ್ಯಪುಸ್ತಕ ಆಧಾರಿತ
3) ಸಾಮರ್ಥ್ಯಾಧಾರಿತ √
4) ಪ್ರಾಜೆಕ್ಟ್ ಆಧಾರಿತ

*4) ಈ ಕೆಳಗಿನ ಯಾವುದು ವಿದ್ಯುನ್ಮಾನ ಉಪಕರಣವಾಗಿದೆ?*
1) ಕಪ್ಪು ಹಲಗೆ
2) ಜಿಯೋ ಬೋರ್ಡ್
3) OHP √

4) ಮಿಂಚು ಪಟ್ಟಿಗಳು

*5) ಪ್ರಸ್ತುತ ಬೋಧನೆಯಲ್ಲಿ ಶಿಕ್ಷಕರ ಪಾತ್ರ -*
1) ವಿಷಯ ಹಂಚಿಕೆ
2) ಜ್ಞಾನವನ್ನು ವೃದ್ಧಿಸುವುದು
3) ವಿದ್ಯಾರ್ಥಿ ಜ್ಞಾನ ಸಂರಚನೆಗೆ ಸಹಕರಿಸುವುದು √
4) ಕೌಶಲ್ಯ ಬೆಳೆಸುವುದು

*6) ಕೆಳಗಿನ ಯಾವುದು ನೈದಾನಿಕ ಪರೀಕ್ಷೆಯ ಲಕ್ಷಣವಾಗಿರುತ್ತದೆ?*
1) ಇದು ವಿದ್ಯಾರ್ಥಿಯ ಸಾಧನೆಯನ್ನು ಪತ್ತೆಹಚ್ಚುತ್ತದೆ
2) ವಿದ್ಯಾರ್ಥಿಯನ್ನು ಮುಂದಿನ ತರಗತಿಗೆ ಬಡ್ತಿ ನೀಡಲು ಸಹಕಾರಿಯಾಗಿದೆ
3) ಇದು  ಪರಿಮಾಣಾತ್ಮಕ ಪರೀಕ್ಷೆಯಾಗಿದ್ದು, ಗುಣಾತ್ಮಕವಾಗಿರುವುದಿಲ್ಲ.
4) ಇದು ಗುಣಾತ್ಮಕ ಪರೀಕ್ಷೆಯಾಗಿದ್ದು, ಆದರೆ ಪರಿಮಾಣಾತ್ಮಕವಾಗಿರುವುದಿಲ್ಲ. √

*7) ಮಗುವಿನ ವಯಸ್ಸು 16 ವರ್ಷಗಳಾಗಿದ್ದು, ಬುದ್ಧಿಶಕ್ತಿ ಪರೀಕ್ಷೆಯಲ್ಲಿ ಅಂಕಗಳು 75, ಹಾಗಾದರೆ ಇವನ ಮಾನಸಿಕ ವಯಸ್ಸು -*

1) 10
2) 12 √
3) 14
4) 15

*8) ಈ ಕೆಳಗಿನವುಗಳಲ್ಲಿ ಕಲಿಕಾರ್ಥಿಯ ಯಾವ ಲಕ್ಷಣವೂ ಬೋಧನೆಯ ಪರಿಣಾಮಕತ್ವಕ್ಕೆ ಹೆಚ್ಚು ಸಂಬಂಧಿಸಿದೆ?*
1) ಕಲಿಯುವವನ ಆರ್ಥಿಕ ಸ್ಥಿತಿಗತಿ
2) ಕಲಿಯುವವರ ಕುಟುಂಬದ ಗಾತ್ರ
3) ಕಲಿಯುವವನ ಪೂರ್ವಜ್ಞಾನ √
4) ಕಲಿಯುವವನ ದೈಹಿಕ ಸ್ಥಿತಿ.

*9) ತರಗತಿ ಸಂವಹನವು ಹೀಗಿರಬೇಕು -*
1) ಶಿಕ್ಷಕ ಕೇಂದ್ರಿತ
2) ವಿದ್ಯಾರ್ಥಿ ಕೇಂದ್ರಿತ√
3)  ಸಾರ್ವತ್ರಿಕ ಕೇಂದ್ರಿತ
4) ಪಠ್ಯಪುಸ್ತಕ ಕೇಂದ್ರಿತ

*10) ಈ ಕೆಳಗಿನ ಯಾವ ಅಂಶವು ಶಿಶು ಕೇಂದ್ರಿತ ಶಿಕ್ಷಣವನ್ನು ದೃಢಪಡಿಸುತ್ತದೆ?*

1) ಉಪನ್ಯಾಸ ಪದ್ಧತಿ
2) ನಿಗಮನ ಪದ್ಧತಿ
3) ಅನುಗಮನ ಪದ್ಧತಿ √
4) ಅನುಗಮನ ಮತ್ತು ನಿಗಮನ ಪದ್ಧತಿ

==========================

==================================
*1) ಕಲಿಕಾ ನ್ಯೂನ್ಯತೆಗೆ ಸಂಬಂಧಿಸಿದಂತೆ ತಪ್ಪಾದ ಆಯ್ಕೆ ಯಾವುದು?*
1) ಡಿಸ್ ಪ್ರೆಸ್ಸಿಯಾ - ಅಂಗಾಂಗಗಳ ಬಳಕೆಯ ಸಮನ್ವಯತೆಯಲ್ಲಿ ದೋಷ.
2) ಡಿಸ್ ನೋಮಿಯಾ - ಪದಗಳು ಅಥವಾ ವಸ್ತುಗಳ ಪದಗಳ ನೆನಪಿಸಿಕೊಳ್ಳುವಲ್ಲಿ ದೋಷ.
3) ಡಿಸ್ ಫಾಸಿಯಾ - ಭಾಷೆ ಅರ್ಥೈಸಿಕೊಳ್ಳುವಿಕೆಯಲ್ಲಿ ನ್ಯೂನತೆ
4) ಡಿಸ್ ಫೋನಿಯಾ - ಪದಗಳ ಗುರಿತಿಸುವಿಕೆಯಲ್ಲಿ

ದೋಷ

√

*2) ಶಾಲೆಯಲ್ಲಿ ಸಮನ್ವಯತೆಯ ಪ್ರಾಥಮಿಕ ಕೇಂದ್ರೀಕರಿಸುವುದು (TET 2014)*
a) ವಿಶೇಷ ವರ್ಗದ ಮಕ್ಕಳಿಗೆ ಅವಕಾಶ ಕಲ್ಪಿಸುವುದರಿಂದ√
b) ಕೇವಲ ಅಂಗವೈಕಲತೆಯ ಮಕ್ಕಳು ಅಗತ್ಯತೆಯನ್ನು ಪೂರೈಸಲು
c) ತರಗತಿಯ ಸಂಪೂರ್ಣ ಖರ್ಚಿನಲ್ಲಿ ಅಂಗವೈಕಲ್ಯ ಮಕ್ಕಳ ಅಗತ್ಯತೆಯನ್ನು ಪೂರೈಸುವುದು
d) ಶಾಲೆಯ ಅನಕ್ಷರಸ್ಥ ಪೋಷಕರ ಅಗತ್ಯತೆಯನ್ನು ಒಳಗೊಂಡಿದೆ

*3) ತರಗತಿಗಳಲ್ಲಿ ಲಿಂಗ ತಾರತಮ್ಯದ ಒಂದು ಪರಿಣಾಮ -*
a) ಅದು ವಿದ್ಯಾರ್ಥಿಗಳಲ್ಲಿ ಆರೋಗ್ಯಕರ ಸ್ಪರ್ಧೆ ಬೆಳೆಸುತ್ತದೆ
b) ಹುಡುಗರು ಮತ್ತು ಹುಡುಗಿಯರಿಗೆ ವಿಭಿನ್ನ ಕಲಿಕಾವಕಾಶ ಸೃಷ್ಟಿಸುತ್ತದೆ
c) ಮಕ್ಕಳ ಕಲಿಕಾ ವಾತಾವರಣಕ್ಕೆ ಪೂರಕವಾಗಿದೆ
d) ಮಕ್ಕಳ ಕಲಿಕೆಯಲ್ಲಿ ನಿರುತ್ಸಾಹ

ಉಂಟುಮಾಡುತ್ತದೆ.√

*4) ಈ ಕೆಳಗಿನ ಯಾವುದು ವಸ್ತುನಿಷ್ಠ ಮಾದರಿ ಪ್ರಶ್ನೆಗಳ ಅವಗುಣವಾಗಿದೆ?*
1) ವಸ್ತುನಿಷ್ಠ ಮತ್ತು ವಿಶ್ವಾಸನೆಯ ಗುಣ ಹೆಚ್ಚಾಗಿರುತ್ತದೆ.
2) ಈ ಪ್ರಶ್ನೆಗಳಲ್ಲಿ ವ್ಯಕ್ತಿನಿಷ್ಟ ಅಂಶ ಕಡಿಮೆ ಇರುತ್ತದೆ
3) ಮಕ್ಕಳಲ್ಲಿ ಅಭಿವ್ಯಕ್ತಿ ಸಾಮರ್ಥ್ಯವನ್ನು ಪರೀಕ್ಷಿಸುವುದಿಲ್ಲ √
4) ಕಡಿಮೆ ಸಮಯದಲ್ಲಿ ಉತ್ತರಿಸುವ ಪ್ರಶ್ನೆಗಳು

*4) ಸಾಮೂಹಿಕ ಆಲೋಚನೆ ಮತ್ತು ಸಾಮೂಹಿಕ ನಿರ್ಧಾರಕ್ಕೆ ಮನ್ನಣೆ ನೀಡುವ ಬೋಧನಾ ವಿಧಾನ ಯಾವುದು?*
1) ಉಪನ್ಯಾಸ ಪದ್ಧತಿ
2) ಅನುಗಮನ ಪದ್ಧತಿ
3) ಚರ್ಚಾ ವಿಧಾನ √
4) ಸಮಸ್ಯೆ ಪರಿಹಾರ ಪದ್ಧತಿ.

*5) ಶಿಕ್ಷಕನು ಸಜೀವಿ ಮತ್ತು ನಿರ್ಜೀವಿಗಳನ್ನು ಗುರುತಿಸಲು ತಿಳಿಸಿದ. ಇದು ಯಾವ ಭೋದನಾ ಗುರಿ

ಉದ್ದೇಶ ಈಡೇರಿಸುತ್ತದೆ?*
1) ಜ್ಞಾನ √
2) ತಿಳುವಳಿಕೆ
3) ಕೌಶಲ್ಯ
4) ವಿಶ್ಲೇಷಣೆ

*6) 'ಲಿಂಗ ಭೇದ' ಉಂಟು ಮಾಡುವ ಪ್ರಾಥಮಿಕ ಸಂಸ್ಥೆ-*
1) ಶಾಲೆ
2) ಸಮಾಜ
3) ಕುಟುಂಬ √
4) ಸಂಘ ಸಂಸ್ಥೆಗಳು

*7) ಕೆಳಗಿನ ಯಾವ ಹೇಳಿಕೆ ತಪ್ಪಾಗಿದೆ?*

1) ವೀಕ್ಷಣೆ ಒಂದು ಮೌಲ್ಯಮಾಪನ ತಂತ್ರವಾಗಿದೆ.
2) 5 E ಮಾದರಿ ಪಾಠ ಯೋಜನೆ ಸಂರಚನ ತತ್ವ ಆಧರಿಸಿದೆ.
3) 6ನೇ ತರಗತಿ ಮಕ್ಕಳಿಗೆ ವಾರ್ಷಿಕವಾಗಿ ರೂಪಣಾತ್ಮಕ ಮೌಲ್ಯಮಾಪನದ ಅಂಕಗಳು 60 ಆಗಿರುತ್ತವೆ √

4) 5 ನೇ ತರಗತಿ ಮಕ್ಕಳಿಗೆ ವಾರ್ಷಿಕವಾಗಿ ರೂಪಣಾತ್ಮಕ ಮೌಲ್ಯಮಾಪನದ ಅಂಕಗಳು 60 ಆಗಿರುತ್ತವೆಆಗಿರುತ್ತವೆ.

*8) ರೂಪಣಾತ್ಮಕ ಮೌಲ್ಯಮಾಪನದ ತಂತ್ರವಾಗಿದೆ-*

1) ಸೆಮಿಸ್ಟರ್ ಪರೀಕ್ಷೆ
2) ವಾರ್ಷಿಕ ಪರೀಕ್ಷೆ
3) ಘಟಕ ಪರೀಕ್ಷೆ √
4) ಮಾಸಿಕ ಪರೀಕ್ಷೆ

*9) ಕ್ಲಟ್ಟರಿಂಗ್ ಈ ದೋಷ -*

1) ಮಕ್ಕಳು ತೊದಲಿಸುವಿಕೆ ದೋಷ
2) ಮಕ್ಕಳು ಗುಗ್ಗಿಸುವಿಕೆ ದೋಷ
3) ಮಕ್ಕಳು ವೇಗವಾಗಿ ಮಾತನಾಡುವಿಕೆ ದೋಷ √
4) ಮಾತನಾಡಲು ಬರದಿರುವ ಸಮಸ್ಯೆ

*10) ಕಲಿಕೆಯಲ್ಲಿನ ಕುಂದು ಕೊರತೆಗಳನ್ನು ಆಗಲಿ ಅಥವಾ ಸಮಸ್ಯೆಗಳನ್ನು ಆಗಲಿ ಕಂಡುಹಿಡಿಯುವ ಪರೀಕ್ಷೆಯೇ -*

a) ಮೌಖಿಕ ಪರೀಕ್ಷೆ
b) ಸಾಧನಾ ಪರೀಕ್ಷೆ
c) ನೈದಾನಿಕ ಪರೀಕ್ಷೆ√
d) ಘಟಕ ಪರೀಕ್ಷೆ

*11) ಭಾಷಾ ಸಾಮರ್ಥ್ಯ, ಉಚ್ಚಾರಣೆ ಮತ್ತು ಅಭಿವ್ಯಕ್ತಿ ಸಾಮರ್ಥ್ಯವನ್ನು ಪರೀಕ್ಷಿಸಬಹುದಾದ ಪ್ರಶ್ನೆಗಳ ಸ್ವರೂಪ*
1) ವಸ್ತುನಿಷ್ಠ ಪ್ರಶ್ನೆಗಳು
2) ಲಿಖಿತ ಪ್ರಶ್ನೆಗಳು
3) ಪ್ರಬಂಧ ಮಾದರಿ ಪ್ರಶ್ನೆಗಳು
4) ಮೌಖಿಕ ಪ್ರಶ್ನೆಗಳು √

*12) ಸ್ವಅಭಿವ್ಯಕ್ತಿ ಸಾಮರ್ಥ್ಯ ಹೆಚ್ಚಿಸುವ ಪ್ರಶ್ನೆಯ ವಿಧಗಳು -*
1) ವಸ್ತುನಿಷ್ಠ ಪ್ರಶ್ನೆಗಳು
2) ಲಿಖಿತ ಪ್ರಶ್ನೆಗಳು
3) ಪ್ರಬಂಧ ಮಾದರಿ ಪ್ರಶ್ನೆಗಳು √
4) ಮೌಖಿಕ ಪ್ರಶ್ನೆಗಳು

*13) ಈ ಉದ್ದೇಶಕ್ಕೆ ಸಂಬಂಧಿಸಿದಂತೆ ಹೆಚ್ಚು ಪ್ರಶ್ನೆಗಳಿದ್ದರೆ ಪರೀಕ್ಷೆಯು ಕ್ಲಿಷ್ಟವಾಗುತ್ತದೆ -*
1) ಜ್ಞಾನ
2) ತಿಳುವಳಿಕೆ
3) ಅನ್ವಯ √
4) ಕೌಶಲ

*14) ಶಿಕ್ಷಕರು ಒಂದು ಬೋಧನಾ ಸನ್ನಿವೇಶದಲ್ಲಿ ಒಂದು ಹಾಳೆಯ ಹಲವು ತುಂಡುಗಳನ್ನು ಮತ್ತು ದಾರವನ್ನು ವಿದ್ಯಾರ್ಥಿಗಳಿಗೆ ನೀಡಿ ಅದನ್ನು ಎರಡು ಭಾಗಗಳಾಗಿ ವಿಂಗಡಿಸುವಂತೆ ಸೂಚಿಸುತ್ತಾರೆ. ಈ ಬೋಧನಾ ಸನ್ನಿವೇಶದಲ್ಲಿ ಶಿಕ್ಷಕರು ಬಳಸಿದ 5E ಕಲಿಕಾ ಮಾದರಿಯ ಹಂತ -*
1) ತೊಡಗಿಸುವುದು √
2) ಅನ್ವೇಷಿಸುವುದು
3) ವಿವರಿಸುವುದು
4) ವಿಸ್ತರಿಸುವುದು

*15) ಪಾಠಕ್ಕೆ ಪೀಠಿಕೆಯನ್ನು ನೀಡುವ ಉದ್ದೇಶ - (TET 2023)*
A) ವಿದ್ಯಾರ್ಥಿಗಳ ಕಲಿಕಾ ಸಮಸ್ಯೆಗಳನ್ನು

ನಿವಾರಿಸುವುದು

B) ವಿದ್ಯಾರ್ಥಿಗಳ ಪೂರ್ವಜ್ಞಾನವನ್ನು ಬಳಸುವುದು

C) ಪಾಠದ ಮುಖ್ಯಾಂಶಗಳನ್ನು ನೀಡುವುದು

D) ಕಲಿಕೆಗೆ ವಿದ್ಯಾರ್ಥಿಗಳನ್ನು ಸಿದ್ಧಪಡಿಸುವುದು

1) A & B

2) B & C

3) A & D

4) B & D√

==========================

*1) ಭಾಷಾ ಮೌಲ್ಯಮಾಪನದಲ್ಲಿ ವಸ್ತು ನಿಷ್ಠ ಮಾದರಿ ಪ್ರಶ್ನೆಗಳನ್ನು ಅಳವಡಿಸುವ ಪ್ರಮುಖ ಉದ್ದೇಶ -*

1) ಸ್ವತಂತ್ರ ಅಭಿವ್ಯಕ್ತಿ ಸಾಮರ್ಥ್ಯದ ಮಾಪನ

2) ಮಕ್ಕಳ ಜಾಣ್ಮೆ, ಬುದ್ಧಿಶಕ್ತಿ,ಆಲೋಚನಾ ಶಕ್ತಿ ಮತ್ತು ಸ್ಮರಣ ಶಕ್ತಿ ಮಾಪನ √

3) ಮಕ್ಕಳ ವಿವರಣಾ ಮತ್ತು ವಿಮರ್ಶಾತ್ಮಕ ಶಕ್ತಿ ಸಾಮರ್ಥ್ಯ ಮಾಪನ
4) ಮಕ್ಕಳ ಭಾಷಾ ಪ್ರಭುತ್ವ ಸಾಮರ್ಥ್ಯದ ಮಾಪನ.

*2) ಕೆಳಗಿನ ಯಾವುದು ಮೌಲ್ಯಮಾಪನ ತಂತ್ರ?*
1) ಪರೀಕ್ಷೆ √
2) ಪ್ರಶ್ನೆ ಪತ್ರಿಕೆ
3) ದರ್ಜಾ ಮಾಪನ ತಪಶೀಲಪಟ್ಟಿ
4) ತಪಶೀಲು ಪಟ್ಟಿ

*3) ಕೆಳಗಿನ ಯಾವುದು ಬಹು ಆಯ್ಕೆ ಮಾದರಿ ಪ್ರಶ್ನೆಗಳ ಲಕ್ಷಣ ಆಗಿರುವುದಿಲ್ಲ?*
1) ಇವು ಮುಖ್ಯ ಭಾಗ ಮತ್ತು ಪೂರಕ ಪಟ್ಟಿ ಎಂಬ ಎರಡು ಭಾಗ ಒಳಗೊಂಡಿದೆ.
2) ಈ ಪ್ರಶ್ನೆಗಳು ಹೆಚ್ಚು ಭೇದ ಗ್ರಹಣ ಶಕ್ತಿ ಹೊಂದಿರುತ್ತವೆ.
3) ಈ ಪ್ರಶ್ನೆಗಳ ಮೂಲಕ ಉನ್ನತ ಸಾಮರ್ಥ್ಯ ಪರೀಕ್ಷಿಸಬಹುದು√
4) ಇವುಗಳಿಂದ ಮಾನಸಿಕ ಕೌಶಲ್ಯ ಮತ್ತು ತಿಳುವಳಿಕೆ ಪರೀಕ್ಷಿಸಬಹುದು.

*4) ಉತ್ತಮ ಪರೀಕ್ಷಾ  ಸಾಧನದಲ್ಲಿ ವ್ಯಾಪಕತೆ ಎಂಬ ಲಕ್ಷಣ ಒಳಗೊಂಡಿರುವುದು -*
1) ಸಾಮಾನ್ಯ ವ್ಯಕ್ತಿ ಬಳಸುವಂತಿರಬೇಕು
2) ಶ್ರೇಣಿ ನೀಡುವಂತಿರಬೇಕು
3) ಎಲ್ಲಾ ಘಟಕಾಂಶಗಳನ್ನು ಅಳತೆ ಮಾಡುವಂತಿರಬೇಕು √
4) ಮೌಲ್ಯಮಾಪನದ ಉದ್ದೇಶ ಈಡೇರಿಸುವಂತಿರಬೇಕು

*5) 6 ರಿಂದ 14 ವರ್ಷದ ಮಕ್ಕಳ ಮಕ್ಕಳ ಶಿಕ್ಷಣ ಮೂಲಭೂತ ಹಕ್ಕನ್ನಾಗಿಸಿದ ಸಂವಿಧಾನದ ತಿದ್ದುಪಡಿ ಯಾವುದು?*
1) 42 ನೇ ತಿದ್ದುಪಡಿ 1976
2)  44 ನೇ ತಿದ್ದುಪಡಿ 1978
3) 86 ನೇ ತಿದ್ದುಪಡಿ 2002 √
4) 93 ನೇ ತಿದ್ದುಪಡಿ 2005

*6) 'ಬಾಲಕರು ಬಲಶಾಲಿಗಳು ಮತ್ತು ಬಾಲಕಿಯರು ಬಲಹೀನರು' ಎಂಬುದು ಇದಕ್ಕೆ ಉದಾಹರಣೆಯಾಗಿದೆ -*
1) ಲಿಂಗ ಪಾತ್ರ

2) ಲಿಂಗ ತಾರತಮ್ಯ √
3) ಲಿಂಗ ಸಾಮ್ಯತೆ
4) ಲಿಂಗ ಗುರುತಿಸುವಿಕೆ

*7) ಕೆಳಗಿನ ಯಾವ ಆಯ್ಕೆ ಸಿಸಿಇ ಮೌಲ್ಯಮಾಪನದ ಮಹತ್ವ ಸೂಚಿಸುವುದಿಲ್ಲ?*
1) ಪೋಷಕರಿಗೆ ಮಕ್ಕಳ ಸಮಗ್ರ ಹಿಮ್ಮಾಯಿತಿ ನೀಡುತ್ತದೆ
2) ಕಲಿಕೆಯ ಸಾಧನವಾಗಿ ಸಿಸಿಇ ಬಳಕೆ
3) ಅಂಕಗಳಿಗೆ ಹೆಚ್ಚಿನ ಆದ್ಯತೆ ನೀಡುತ್ತದೆ √
4) ಶಿಕ್ಷಣ ವ್ಯವಸ್ಥೆ ನೀತಿ ನಿರೂಪಣೆಗೆ ಸಹಕಾರಿಯಾಗಿದೆ.

*8) ವಿದ್ಯಾರ್ಥಿಗಳು ಕಲಿಯುವ ವಿಷಯಗಳನ್ನು ನಿರಂತರವಾಗಿ ತೂಗಿ ನೋಡಿ ಕಲಿಕೆಯ ಗುಣಮಟ್ಟ ಗುರುತಿಸಿ, ಉತ್ತಮ ಕಲಿಕೆಯ ಕಡೆಗೆ ಅವರನ್ನು ನಿರ್ದೇಶಿಸುವುದು -*
1) ಬೋಧನೆ
2) ಸಂಶೋಧನೆ
3) ಮೌಲ್ಯಮಾಪನ √
4) ಉತ್ತಮ ಪುಸ್ತಕ

*9) ಶಾಲೆಗಳಲ್ಲಿ ಸಹಪಠ್ಯ ಚಟುವಟಿಕೆಗಳು ಒಂದು ಬಹುಮುಖ್ಯ ಉದ್ದೇಶ -*
1) ಸಮಯ ನಿರ್ವಹಣೆ ಪಾಲನೆ
2) ಮನೋರಂಜನೆ √
3) ಮೌಲ್ಯಮಾಪನ
4) ವೀಕ್ಷಣೆ

*10) ಜಿಗ್ಸ (Jigsaw) ಮಾದರಿ ತರಗತಿಯ ಲಕ್ಷಣವಾಗಿರುವದಿಲ್ಲ -*
a) ಸಹಕಾರಿ ಕಲಿಕಾ ತತ್ವ ಒಳಗೊಂಡಿದೆ
b) ಇದನ್ನು ಎಲಿಯಟ್ ಆರಾನ್ಸನ್ ವಿನ್ಯಾಸಗೊಳಿಸಿದ್ದಾರೆ
c) ವಿಭಿನ್ನ ಬುದ್ಧಿವಂತಿಕೆ ಹಿನ್ನೆಲೆ ಇರುವ ಮಕ್ಕಳ ಗುಂಪು ರಚಿಸಿ ಬೋಧಿಸುವುದು √
d) ಕಲಿಕೆಯಲ್ಲಿ ಪರಸ್ಪರ ಅವಲಂಬಿತರಾಗುವಂತೆ ಮಾಡುತ್ತದೆ.

==============================

*1) ಬೋಧನೆ -  ಕಲಿಕಾ ಪ್ರಕ್ರಿಯೆಯಲ್ಲಿ ಪಾಲಕರನ್ನು ಒಳಗೊಳ್ಳುವ ಬೋಧನಾ ತಂತ್ರ -*

1) ಮೌಖಿಕ ಕೆಲಸ

2) ಅಭ್ಯಾಸ ಕಾರ್ಯ

3) ಮನೆ ಗೆಲಸ √

4) ಶಾಲಾ ಗುಂಪು ಚಟುವಟಿಕೆ

*2) ಕಲಿತ ವಿಷಯ ಬೇಗ ಪುನರಾವರ್ತಿಸಲು ಹತ್ಯಪಯುಕ್ತ ತಂತ್ರ -*

1) ಮೌಖಿಕ ಕೆಲಸ ಕಾರ್ಯ√

2) ಅಭ್ಯಾಸ ಕಾರ್ಯ

3) ಮನೆ ಗೆಲಸ

4) ಶಾಲಾ ಗುಂಪು ಚಟುವಟಿಕೆ

*3) ಮಕ್ಕಳಿಗೆ ಯೋಚಿತ ಕಾರ್ಯ ನೀಡುವುದು ಒಂದು -*
1) ತಂತ್ರ √
2) ಬೋಧನೋಪಕರಣ
3) ಬೋಧನೆಯ ತತ್ವ
4) ಬೋಧನಾ ಪ್ರಕ್ರಿಯೆ

*4) ಬೋಧನೆಯಲ್ಲಿ ಅಭ್ಯಾಸ ಕಾರ್ಯವು ಕೆಳಗಿನ ಯಾವ ವಿಷಯಕ್ಕೆ ಹೆಚ್ಚು ಸೂಕ್ತ-*
1) ಕನ್ನಡ
2) ವಿಜ್ಞಾನ
3) ಗಣಿತ√
4)  ಸಮಾಜ ವಿಜ್ಞಾನ

*5) ಕಲಿಕಾ ಪ್ರಕ್ರಿಯೆಯಲ್ಲಿ ICT ಯ ಪ್ರಮುಖ ಪಾತ್ರ ಆಗಿರುವುದಿಲ್ಲ?*
1) ಇದು ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಉಪಯುಕ್ತ
2) ಬೋಧನೆಯನ್ನು ಸರಳಗೊಳಿಸುವುದು
3) ವಿದ್ಯಾರ್ಥಿಗಳಿಗೆ ಪುನರ್ಬಲನ ಮತ್ತು ಪುಷ್ಟಿಕರಣ ನೀಡುತ್ತದೆ
4) ಇದು ಮಕ್ಕಳ ಕಲಿಕೆಯನ್ನು ಹೆಚ್ಚು

ಕ್ಲಿಷ್ಟಗೊಳಿಸುತ್ತದೆ.√

*6) ಇತಿಹಾಸ ಕೊಠಡಿಯ ಒಂದು ಭಾಗದಲ್ಲಿ ಕೆಳಗಿನ ಯಾವ ವಿಭಾಗ ಸ್ಥಾಪಿಸಲಾಗುವುದು?*
1) ವಸ್ತು ಸಂಗ್ರಹಾಲಯ √
2) ಪ್ರಯೋಗಾಲಯ
3) ಗಣಿತದ ಕಿಟ್
4) ಭಾಷಾ ಉಪಕರಣ

*7) ಒಂದು ಪರೀಕ್ಷೆ ತಾನು ಏನನ್ನು ಮಾಪನ ಮಾಡಬೇಕು, ಅದನ್ನೇ ಮಾಪನ ಮಾಡಿದರೆ ಆಗ ಪರೀಕ್ಷೆ -*
1) ಪ್ರಮಾಣೀಕರಿಸುವುದು √
2) ನಂಬಲರ್ಹವಾದುದು
3) ನ್ಯಾಯ ಸಮ್ಮತವಾದದ್ದು
4) ನಿಖರವಾದುದು

*8) "ವಿದ್ಯಾರ್ಥಿಗಳು ತಮಗೆ ತಾವೇ ಕಲಿಯಬಲ್ಲರು, ತಾವೇ ಸಮಸ್ಯೆಯನ್ನು ಬಗೆಹರಿಸಬಲ್ಲರು & ತಿಳಿಯದಿರುವುದನ್ನು ಆವಿಷ್ಕರಿಸುವರು" ಇವು ಇದರ ಲಕ್ಷಣವಾಗಿದೆ -*

1) ಅನುಗಮನ ಪಕ್ರಮ
2) ನಿಗಮನ ಉಪಕ್ರಮ
3) Heuristic  ಉಪಕ್ರಮ √
4) ರಚನಾತ್ಮಕ ಉಪಕ್ರಮ

*9) ಪಂಚೇಂದ್ರಿಯಗಳ ಗರಿಷ್ಠ ಬಳಕೆಗೆ ಅನುವು ಮಾಡಿಕೊಡುವ ಬೋಧನಾ ವಿಧಾನ -*
1) ಉಪನ್ಯಾಸ
2) ಪ್ರಾಯೋಗಿಕ √
3) ಪ್ರಾತ್ಯಕ್ಷಿಕೆ
4) ಗಣಕಯಂತ್ರದ ಬಳಕೆ

*10) ಮಗುವಿನ ಕಲಿಕೆಯ ಕುರಿತು ಒಂದು ಸಣ್ಣ ಕಥೆಯ ರೂಪದಲ್ಲಿ ಅವಲೋಕಿಸುವ ಮೌಲ್ಯಮಾಪನ ಸಾಧನ -*
1) ರೂಬ್ರಿಕ್ಸ್ ( ಮಾನದಂಡ )
2) ಪೋರ್ಟ್ ಪೋಲಿಯೋ (Portfolio)
3) ಉಪಖ್ಯಾನ ದಾಖಲೆ  (Anecdotal Record) √
4) ರೇಟಿಂಗ್ ಸ್ಕೇಲ್.

===================================

===============================

*1) ನಿಗಮನ ಬೋಧನಾ ವಿಧಾನವು ಒಳಗೊಂಡಿರುವ ತತ್ವ*

1) ಸರಳತೆಯಿಂದ ಸಂಕೀರ್ಣತೆಯಡೆಗೆ
2) ನಿಯಮದಿಂದ ಉದಾರಣೆಯಡೆಗೆ √
3) ಉದಾರಣೆಯಿಂದ ನಿಯಮದೆಡೆಗೆ
4) ತಿಳಿದಿರುವುದರಿಂದ ತಿಳಿಯದಿರುವುದರ ಕಡೆಗೆ

*2) ಪ್ರಾಯೋಗಿಕ ಭೋದನಾ ವಿಧಾನವು ಪ್ರದರ್ಶನ ಬೋಧನಾ ವಿಧಾನಕ್ಕಿಂತ ಹೆಚ್ಚು ಸೂಕ್ತ. ಏಕೆಂದರೆ*

1) ಪ್ರಯೋಗವು ನಿರ್ವಹಿಸಲ್ಪಡುತ್ತದೆ
2) ಪ್ರಯೋಗದಲ್ಲಿ ಅಂತರ್ ಕ್ರಿಯೆ ನಡೆಯುತ್ತದೆ
3) ಪ್ರಯೋಗದಲ್ಲಿ ವಿದ್ಯಾರ್ಥಿಗಳು ಸ್ವ ಅನುಭವ ಪಡೆಯುತ್ತಾರೆ.√

4) ಇದು ವಿದ್ಯಾರ್ಥಿಗಳನ್ನು ಪ್ರಯೋಗದ ಸಂದರ್ಭದಲ್ಲಿ ಪ್ರೇರೇಪಿಸುತ್ತದೆ

*3) ಮೌಲ್ಯಮಾಪನವನ್ನು ಎಷ್ಟೇ ಬಾರಿ ಪುನರಾವರ್ತಿಸಿದರು ಫಲಿತಾಂಶ ಒಂದೇ ಇರುವ ಗುಣಲಕ್ಷಣ -*
1) ವಸ್ತುನಿಷ್ಠತೆ
2) ವಿಶ್ವಾಸನೀಯತೆ √
3) ಸಮಂಜಸತೆ
4) ಪ್ರಾಯೋಗಿಕತೆ

*4) ಲಿಂಗ ಪಕ್ಷಪಾತವನ್ನು ತರಗತಿಗಳಲ್ಲಿ ಕಡಿಮೆಗೊಳಿಸುವ ಒಂದು ಕ್ರಮ -*
a) ಹುಡುಗರು ಮತ್ತು ಹುಡುಗಿಯರಿಗೆ ವಿಭಿನ್ನ ಕಾರ್ಯ ವಹಿಸುವುದು
b) ಹುಡುಗಿಯರಿಗೆ ಕೇಂದ್ರೀಕೃತ ಉದಾರಣೆ
c) ಹುಡುಗರು ಮತ್ತು ಹುಡುಗಿಯರಿಗೆ ಒಂದೇ ರೀತಿಯ ಶೈಕ್ಷಣಿಕ ಕಾರ್ಯಗಳನ್ನು ನೀಡುವುದು√
d) ತರಗತಿಯಲ್ಲಿ ಹುಡುಗರು ಮತ್ತು ಹುಡುಗಿಯರನ್ನು ಬೇರ್ಪಡಿಸುವುದು

*5) ಒಬ್ಬ ಶಿಕ್ಷಕನಾಗಿ ವಿದ್ಯಾರ್ಥಿಗಳನ್ನು ಪ್ರೇರೇಪಿಸಲು ಯಾವ ತಂತ್ರಗಳನ್ನು ಅನುಸರಿಸುವಿರಿ?*
1) ವಿದ್ಯಾರ್ಥಿಗಳಿಗೆ ನಿಯಮಿತವಾಗಿ ಶಿಕ್ಷೆ ನೀಡುವುದು.
2) ಬೋಧಿಸುವಾಗ ಕಟ್ಟುನಿಟ್ಟಿನ ನಿಯಮ ಅನುಸರಿಸುವುದು.
3) ಶಿಕ್ಷಕ ಪಾಠ ಬೋಧನೆ ಮಾಡುವಾಗ ಸೂಕ್ತ ಉದಾಹರಣೆಗಳನ್ನು ನೀಡುವುದು.√
4) ಪಾಠದುದ್ದಕ್ಕೂ ಕಲಿಕೋಪಕರಣಗಳ ಬಳಕೆ

*6) ವಿದ್ಯಾರ್ಥಿಗಳ ಭಾಷಾ ಸಾಮರ್ಥ್ಯವನ್ನು ಈ ಕೆಳಗಿನ ಯಾವ ವಿಧದ ಪರೀಕ್ಷೆಯಿಂದ ವ್ಯಾಪಕವಾಗಿ ಅಳೆಯಬಹುದಾಗಿದೆ?*
1) ಬಹು ಆಯ್ಕೆ ಮಾದರಿ
2) ಮೌಕಿಕ ಪ್ರಶ್ನೆಗಳು
3) ಪ್ರಾಯೋಗಿಕ ಮಾದರಿ ಪರೀಕ್ಷೆ
4) ಪ್ರಬಂಧ ಮಾದರಿ ಪರೀಕ್ಷೆ √

*7) ವಿದ್ಯಾರ್ಥಿಗಳ ಮೌಖಿಕ ಅಭಿವ್ಯಕ್ತಿ ಸಾಮರ್ಥ್ಯವನ್ನು ಮಾಪನ ಮಾಡಲು ಬಳಸುವ ಸಾಧನ -*
1) ಪಠ್ಯ ಆಧಾರಿತ ಪ್ರಶ್ನೆಗಳನ್ನು ಕೇಳುವುದು.√

2) ಪ್ರಬಂಧ ಮಾದರಿ ಪ್ರಶ್ನೆಗಳಿಗೆ ಉತ್ತರ ಬರೆಯುವುದು
3) ವಸ್ತುನಿಷ್ಠ ಪ್ರಶ್ನೆಗಳಿಗೆ ಉತ್ತರಿಸುವುದು
4) ಭಾಷಾ ಪರ್ಯಗಳ ಬಗೆಗೆ ಉಕ್ತಲೇಖನ ನೀಡುವುದು

*8) ಶಿಕ್ಷಕ ನಿರ್ದಿಷ್ಟ ಕಾರ್ಯವಿಧಾನ ಮತ್ತು ಉಪಕರಣಗಳ ಬಳಕೆಯ ಮೂಲಕ ಅಂಕ ನೀಡುವಿಕೆ ನಿಗದಿಪಡಿಸಿ ಬೇರೊಂದು ಸ್ಥಳದಲ್ಲಿ ಪರೀಕ್ಷಿಸಬಹುದಾದ ಮೌಲ್ಯಮಾಪನ ಯಾವುದು?*
1) ಶಿಕ್ಷಕ ನಿರ್ಮಿತ ಪರೀಕ್ಷೆ
2) ಪ್ರಮಾಣಿಕೃತ ಪರೀಕ್ಷೆ √
3) ಆದರ್ಶ ಆಧಾರಿತ ಪರೀಕ್ಷೆ
4) ಪ್ರಮಾಣ ಆಧಾರಿತ ಪರೀಕ್ಷೆ

*9) ವಿದ್ಯಾರ್ಥಿಗಳ ಮಧ್ಯ ಕಲಿಕಾ ಪ್ರಮಾಣದ ವ್ಯತ್ಯಾಸವನ್ನು ಪತ್ತೆ ಹಚ್ಚುವ ಪರೀಕ್ಷೆ ಯಾವುದು?*
1) ಶಿಕ್ಷಕ ನಿರ್ಮಿತ ಪರೀಕ್ಷೆ
2) ಪ್ರಮಾಣಿಕೃತ ಪರೀಕ್ಷೆ
3) ಆದರ್ಶ ಆಧಾರಿತ ಪರೀಕ್ಷೆ √
4) ಪ್ರಮಾಣ ಆಧಾರಿತ ಪರೀಕ್ಷೆ

*10) ಕಲಿಕೆಯ ಮೌಲ್ಯಮಾಪನದಲ್ಲಿ ಮುಖ್ಯ ಕೇಂದ್ರೀಕೃತ ಅಂಶ -*
1) ಕಲಿಕೆಯ ಕೌಶಲ ಬೆಳೆಸುವುದು
2) ಕಲಿವಿನ ಫಲಗಳಲ್ಲಿನ ಸಾಧನೆಯನ್ನು ಕಂಡುಕೊಳ್ಳುವುದು√
3) ವಿದ್ಯಾರ್ಥಿಗಳನ್ನು ಆಗಾಗ್ಗೆ ಮೌಲ್ಯಾಂಕನ ಮಾಡುವುದು
4) ಓದಿನ ಹವ್ಯಾಸ ಬೆಳೆಸುವುದು.

11) *ಮೌಲ್ಯಮಾಪನ ಮಾಡುವುದು ಎಂದರೆ?*
1) ಈ ಹಿಂದೆ ಕಲಿತ ವಿಚಾರಗಳನ್ನು ಸ್ಮರಿಸುವುದು
2) ತಮ್ಮ ಸ್ವಂತ ಪದಗಳಲ್ಲಿ ವಿವರಿಸುವುದು
3) ವಿವರಗಳನ್ನು ಪಟ್ಟಿ ಮಾಡುವುದು
4) ವಿಚಾರಗಳ ಮೌಲ್ಯವನ್ನು ತೀರ್ಮಾನಿಸುವುದು.√

12) *ಸಾಧನ ಪರೀಕ್ಷೆಗಳಲ್ಲಿ ಪ್ರಶ್ನೆಗಳನ್ನು ಕೆಳಗಿನ ಯಾವ ಅಂಶ ಆಧರಿಸಿ ರಚಿಸಬೇಕು?*
1) ಘಟಕಗಳು
2) ಉದ್ದೇಶಗಳು √
3) ಕಲಿಕೋಪಕರಣ
4) ಬೋಧನಾ ವಿಧಾನ

13) *ಪರಿಹಾರ ಬೋಧನೆಯು*
1) ಕಲಿಕಾ ನ್ಯೂನತೆ ಪತ್ತೆ ಹಚ್ಚುತ್ತದೆ
2) ಹೆಚ್ಚು ಅಂಕ ಗಳಿಸಲು ಉತ್ತೇಜಿಸುತ್ತದೆ.
3) ಕಲಿಕೆಯಲ್ಲಿ ಹಿಂದುಳಿದಿರುವಂತೆ ಮಾಡುತ್ತದೆ
4) ಚಿಕಿತ್ಸಾ ಕ್ರಮವಾಗಿದೆ.√

14) *ಈ ಕೆಳಗಿನ ಯಾವುದು ಸಿಸಿಇ ಯ ಉದ್ದೇಶವಲ್ಲ?*
1) ಅಂಕಗಳ ಬದಲಿಗೆ ಗ್ರೇಡ್ ಪದ್ಧತಿ ಜಾರಿಗೆ ತಂದಿದೆ.
2) ಪರೀಕ್ಷಾ ಭಯ ಮತ್ತು ಆತಂಕ ಹೋಗಲಾಡಿಸುವುದು
3) ವಿದ್ಯಾರ್ಥಿಗಳನ್ನು ವಿವಿಧ ಆಯಾಮಗಳಲ್ಲಿ ಪರೀಕ್ಷಿಸುವುದು
4) ವಿದ್ಯಾರ್ಥಿಗಳನ್ನು ಪಠ್ಯ ವಿಷಯದಲ್ಲಿ ಮಾತ್ರ ಮೌಲಿಕರಿಸುವುದು.√

15) *ದತ್ತಾಂಶ ಸಂಗ್ರಹಿಸಿದ ನಂತರದ ಮೌಲ್ಯಮಾಪನ ಪ್ರಕ್ರಿಯೆ ಹೊಂದಿರುವ ಘಟಕಾಂಶಗಳು*

(1) ಅರ್ಥೈಸುವಿಕೆ, ಸಂಶ್ಲೇಷಣೆ, ನಿರ್ಣಯ
(2) ಅರ್ಥೈಸುವಿಕೆ, ಮೌಲ್ಯ ನಿರ್ಣಯ, ಫಲಿತಾಂಶ
(3) ಅರ್ಥೈಸುವಿಕೆ, ಕಾಲರೇಖೆ, ಅನುಚಿಂತನೆ
(4) ಅರ್ಥೈಸುವಿಕೆ, ವಿಶ್ಲೇಷಣೆ, ಅನುಚಿಂತನೆ√